ಅಧ್ಯಕ್ಷರು : ಮಾನ್ಯ ವಿಶ್ವೇಶ್ವರ ಹೆಗಡೆಯವರು ಕಟ್ಟಾ ಸುಬ್ರಮಣ್ಯ ನಾಯ್ಡುರವರ ಪರವಾಗಿ ಪ್ರಶ್ನೆಕೇಳಿ.

ಬೆಂಗಳೂರು ಸುತ್ತಮುತ್ತಲಿನ ಸಿ.ಎಂ.ಸಿ.ಗಳಲ್ಲಿ ಮನೆ ನಿರ್ಮಿಸಲು ನಕ್ಷೆ ಮಂಜೂರು ಮಾಡದೇ ಇರುವುದು

128(501) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರಿನ ಸುತ್ತಮುತ್ತಲಿನ ಸಿ.ಎಂ.ಸಿ ವ್ಯಾಪ್ತಿಯಲ್ಲಿ ಮನೆ ನಿರ್ಮಿಸಲು ನಕ್ಷೆಗಳಿಗೆ ಮಂಜೂರಾತಿ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು;

ಇ) ಮನೆ ನಕ್ಷೆ ಮಂಜೂರಾತಿಗಾಗಿ ಕೋರಿ ವಿವಿಧ ಸಿ.ಎಂ.ಸಿ.ಗಳಿಗೆ ಬಂದಿರುವ ಅರ್ಜಿಗಳೆಷ್ಟು;

ಈ) ಮನೆ ನಕ್ಷೆ ಮಂಜೂರಾಗದೆ ಮನೆಗಳನ್ನು ನಿರ್ಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಎಲ್ಲಾ ಸಿ.ಎಂ.ಸಿ.ಗಳಲ್ಲಿ ನಕ್ಷೆ ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು) :

ಅ) ಬಂದಿದೆ.

ಆ) ಬೆಂಗಳೂರು ಸುತ್ತಮುತ್ತಲಿನ ನಗರಸಭೆಗಳ ವ್ಯಾಪ್ತಿಯ ಪ್ರದೇಶಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯೋಜನಾ ಪ್ರಾಧಿಕಾರವಾಗಿದೆ. ಈ ಪ್ರದೇಶಗಳಲ್ಲಿ ವ್ಯಾಪಕ ಅಭಿವೃದ್ಧಿ ಯೋಜನೆ ಮತ್ತು ವಲಯ ನಿಯಮಾವಳಿಯ ಅನ್ವಯ ಅನುಮೋಡಿಸಿರುವ ನಿವೇಶನಗಳಿಗೆ ಮಾತ್ರ ನಕ್ಷೆ ಮಂಜೂರಾತಿ ಮಾಡಲು ಕಾನೂನಿನಲ್ಲಿ ಅವಕಾಶವಿರುತ್ತದೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುಮತಿ ಇಲ್ಲದೆ ರಚಿಸಿರುವ ನಿವೇಶನಗಳಿಗೆ ನಕ್ಷೆ ಮಂಜೂರಾತಿ ಮಾಡು ಕಾನೂನಿನಲ್ಲಿ ಅವಕಾಶ ವಿರುವುದಿಲ್ಲ.

ಇ) 4,171

ಈ) ಬಂದಿದೆ ಇವುಗಳನ್ನು ತಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಅರ್ಜಿದಾರರು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನಕ್ಷೆ ಮಂಜೂರಾತಿ ಮಾಡಲು ಅನುಮತಿ ಪಡೆದಲ್ಲಿ ನಗರ ಸಭೆಗಳು ನಕ್ಷೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ ಬೆಂಗಳೂರು ಸುತ್ತಮುತ್ತ ಇರುವ ಸಿಎಂಸಿಗಳಲ್ಲಿ 10 ಲಕ್ಷಕ್ಕಿಂತ ಹೆಚ್ಚು ಜನ ವಾಸಮಾಡುತ್ತಿರುವುದು ನಮ್ಮೆಲ್ಲರಿಗೆ ತಿಳಿದಿರುವಂಥದು. ಆದರೆ ಇದುವರೆಗೆ ನಕ್ಷೆಗೆ ಮಂಜೂರಾತಿ ಕೊಡದೇ ಇರುವುದರಿಂದಾಗಿ ಸರ್ಕಾರವೇ ಹೇಳಿರುವಂತೆ 4171 ಅರ್ಜಿಗಳು ಇನ್ನೂ ಇತ್ಯರ್ಥವಾಗುವುದು ಬಾಕಿ ಇದೆ. ಈಗ ಬೆಟರ್‌ಮೆಂಟ್ ಚಾರ್ಜಸನ್ನು ಬಿಡಿಎಗೆ ಕಟ್ಟುತ್ತಾರೆ. ಆದರೆ ಅಭಿವೃದ್ಧಿಪಡಿಸುವ ಎಲ್ಲಾ ಜವಾಬ್ದಾರಿ ಇರುವುದು ಸಿಎಂಸಿಗಳಿಗೆ. ಬಿಡಿಎ ಸಿಎಂಸಿಗಳ ಮಧ್ಯೆ ಈ ಗೊಂದಲದಿಂದಾಗಿ ಒಂದೂವರೆ ವರ್ಷದ ಹಿಂದೆ ಎಲ್ಲರಿಗೂ

ನಕ್ಷೆಗೆ ಮಂಜೂರಾತಿ ಕೊಡುತ್ತಿದ್ದರು. ಈಗ ಒಂದೂವರೆ ವರ್ಷದಿಂದ ಮಂಜೂರಾತಿ ಸಿಗುತ್ತಿಲ್ಲ ಅಭಿವೃದ್ಧಿ ಕೆಲಸಗಳು ನಿಂತುಹೋಗಿವೆ. ಅನೇಕರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ಸಚಿವರು ಹಿಂದೆ ಒಂದೂವರೆ ವರ್ಷದ ಹಿಂದೆ ಯಾವ ಕಾರಣಕ್ಕೋ ಗೊತ್ತಿಲ್ಲ ವೈಯಕ್ತಿಕ ಪ್ರತಿಷ್ಠೆಗೋ ಇನ್ಯಾವ ಕಾರಣಕ್ಕೋ ನಕ್ಷೆಗೆ ಮಂಜೂರಾತಿ ಕೊಡುವುದನ್ನು ನಿಲ್ಲಿಸಿದ್ದಾರೆ. ಅದನ್ನು ಯಾವಾಗಿನಿಂದ ಪ್ರಾರಂಭಿಸುತ್ತೀರಿ ಮತ್ತು ಅರ್ಧಂಬರ್ಧ ಕಟ್ಟಡಗಳನ್ನು ಕಟ್ಟಿಕೊಂಡವರಿಗೆ ಪೂರ್ಣಗೊಳಿಸಲು ಯಾವಾಗ ಅವಕಾಶ ಕೊಡುತ್ತೀರಿ? ಇದರಲ್ಲಿ ಬಿಡಿಎ ಯಾಕೆ ಹಸ್ತಕ್ಷೇಪ ಮಾಡಬೇಕು ಎಂದು ಮಾನ್ಯ ಸಚಿವರು ತಿಳಿಸಬೇಕು ಅಂತ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ 1994–2001ರಲ್ಲಿ ಪಂಚಾಯ್ತಿ ವ್ಯಾಪ್ತಿಗೆ ಬರುವ ಜಮೀನಿಗೆ ಲೈಸೆನ್ಸ್ ಕೊಡುತ್ತಿದ್ದರು. ಅದು ಸೀಮಿತವಾಗದೆ ಎಲ್ಲಾ ಜಾಗವನ್ನೂ ಆಕ್ರಮಿಸಿತು, ಎಲ್ಲರೂ ಸೈಟುಗಳನ್ನು ಅಧರಲ್ಲಿ ಮಾಡಿ ಕಾನೂನು ಇಲ್ಲದೆ ಮಾರಲಿಕ್ಕೆ ಶುರುವಾದ ಮೇಲೆ ಬಿಡಿಎ ಮೂಲಕ ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು; ಆಗ ಚದರಡಿಗೆ 10 ರೂಪಾಯಿ ವಾಸ ಮಾಡುವ ಪ್ರದೇಶಕ್ಕೆ, 14 ರೂ ವಾಣಿಜ್ಯ ಪ್ರದೇಶಕ್ಕೆ ಹಾಕುತ್ತಿದ್ದೆವು. ಇದೆಲ್ಲಾ ಇಲೀಗಲ್ ಅಕ್ಯುಪೈಡ್ ಜಾಗ. ಸಿವಿಕ್ ಅಮಿನಿಟಿ ನಾವು ಕೊಡಬೇಕಾಗುತ್ತದೆ. ಅವರಿಗೆ ರಸ್ತೆ ಕೊಡಬೇಕು ಚರಂಡಿ ಕೊಡಬೇಕು ನೀರು ಕೊಡಬೇಕು ಎಲ್ಲಾ ಸಿವಿಕ್ ಅಮಿನಿಟಿಯನ್ನು ಕೊಡುವ ಕೆಲಸ ಮಾಡುವುದರಿಂದ ಇದಕ್ಕೆ ಬಿಡಿಎ ಒಪ್ಪಿಗೆ ಬೇಕಾಗುತ್ತದೆ ಅಂತ ಮಾಡಿ ಈ ಮುನಿಸಿಪಾಲಿಟಿಗಳು ಬಂದ ಮೇಲೆ 1994–2001ರವರೆಗೆ ಇದ್ದುದ್ದನ್ನು ತೆಗೆದು ಮುನಿಸಿಪಾಲಿಟಿಗಳಿಗೆ ಎರಡು ಟೈಂ ಫೆನಾಲ್ಟಿ ಹಾಕಿ ಕೊಡುವಂಥದು ಆಗಿದೆ. ಈಗ ಏನು 4171 ಅರ್ಜಿಗಳು ಬಂದಿವೆ ಆ ಸೈಟುಗಳಲ್ಲಿ ಕನ್‌ಸ್ಟ್ರಕ್ಷನ್ ಆಗಿಲ್ಲ, ಹಾಗಾಗಿ ಇವುಗಳಿಗೆ ಬಿಡಿಎ ಅನುಮತಿ ಕೂಡ ಕೊಟ್ಟಿಲ್ಲ. ಆದ್ದರಿಂದ ಇದಕ್ಕೆ ಅವಕಾಶ ಇಲ್ಲ.

ಶ್ರೀ ಆರ್. ಅಶೋಕ : ತಾವು ನಗರಸಭೆ ವ್ಯಾಪ್ತಿಯಲ್ಲಿ ಬೆಟರ್‌ಮೆಂಟ್ ಚಾರ್ಜಸ್ ಮತ್ತು ನಕ್ಷೆ ಮಂಜೂರಾತಿಗಳನ್ನು ಬಿಡಿಎಗೆ ಕೊಡಬೇಕು ಅಂತ ಹೇಳುತ್ತಿದ್ದೀರಿ. ಎಷ್ಟು ಸಮಂಜಸ ಅಂತ ನೋಡಿ. ಕಳೆದ ಸರ್ಕಾರದಲ್ಲಿ ಮಾನ್ಯ ಸೋಮಣ್ಣನವರೂ ಮಂತ್ರಿಯಾಗಿದ್ದರು, ಅವರು ಮಾನ್ಯ ದೇವೇಗೌಡರನ್ನು ಕರೆದುಕೊಂಡು ಊರೂರು ಸುತ್ತಿಸಿದ್ದರು. ನೀವು 4 ಸಾವಿರ ಅರ್ಜಿ ಅಲ್ಲ ಬಂದಿರುವುದು, 40 ಸಾವಿರ ಅರ್ಜಿ ಇದೆ. ಎರಡು ಲಕ್ಷ ಮನೆ ಕಟ್ಟುಬಿಟ್ಟಿದ್ದಾರೆ, ಒಡೆದು ಹಾಕುತ್ತೀರಾ ಅವುಗಳನ್ನು ಹಾಗಾದರೆ? ಅದಕ್ಕೆ ಸರ್ಕಾರ ಬಡವರ ಎರಡು ಲಕ್ಷ ಮನೆ ಒಡೆಯುವುದಕ್ಕೆ ಆಗುವುದಿಲ್ಲ ಅಂತ, ಜನತಾದಳದ ಮ್ಯಾನಿಫೆಸ್ಟೋದಲ್ಲಿ ಕೊಟ್ಟಿದ್ದಾರೆ ಅದರಲ್ಲಿ ಹೇಳಿದ್ದಾರೆ ಬಡವರು ಕಟ್ಟಿರುವ ಮನೆ ಯಾವುದೇ ಕಾರಣಕ್ಕೂ ನಾವು ಒಡೆಯುವುದಿಲ್ಲ ಅಂತ, ಅವರಿಗೆ ನಕ್ಷೆ ಮಾಡಲಿಲ್ಲ ಅಂದರೆ ಅವರೇನು ಮಾಡುವರು? ನೋಡಿ 10 ಸಾವಿರ ರೂಪಾಯಿ ಕೊಡಿ, ನಿಮಗೆ ನಾಳೇನೆ ಲೈಸೆನ್ಸ್ ಫೀಸು ನಕ್ಷೆ ಮಂಜೂರಾತಿ ಎಲ್ಲಾ ತಂದು ಕೊಡುತ್ತೇನೆ, ಇಲ್ಲೇ ತಂದಿದ್ದೇನೆ ನೋಡಿ. ನಗರಸಭೆ ಕಮಿಶನರ್ ಎಲ್ಲಾ ಸೈನ್ ಹಾಕಿದ್ದಾರೆ. ಅಂತ ಹೇಳುತ್ತಾರೆ ಎಲ್ಲಾ ಬೋಗಸ್. ಅವರಿಗೆ ಬ್ಯಾಂಕಿಗೆ ಬೇಕಾಗಿದೆ ಅಷ್ಟೇ. ದಾಖಲೆ ನಿಜವೋ ಸುಳ್ಳೋ ಬೇಕಾಗಿಲ್ಲ, 10 ಸಾವಿರ ರೂ ಕೊಡುತ್ತಾರೆ ಪ್ರೈವೇಟ್ ಏಜೆನ್ಸಿಗಳಿವೆ, ಏಳೂ ನಗರಸಭೆಗಳಲ್ಲೂ ಇದೇ ನಡೆಯುತ್ತಿರುವುದು ಸುಮಾರು 20 ಸಾವಿರ ಈಗಾಗಲೇ ಪ್ಲಾನ್ ಮಂಜೂರಾಗಿದೆ. ಕಮಿಶನರ್ ಎಇಇ ಸೈನ್ ಎಲ್ಲಾ ಇದೆ ನಗರಾಭಿವೃದ್ಧಿ

ಶುಲ್ಕ ಎಲ್ಲಾ ಇದೆ ನನ್ನ ಹತ್ತಿರ ಒಂದು ರೀತಿ ತೊಘಲಕ್ ದರ್ಬಾರ್ ತರಹ ನೀವು ಮಾಡುತ್ತಿದ್ದೀರಿ. ಕಳೆದ ಸರ್ಕಾರ ಬಡವರ ಪರವಾಗಿ ಮಾಡಿತು, ನೀವು ಕ್ಯಾನ್ಸಲ್ ಮಾಡಿಬಿಟ್ಟಿರಿ, ಜನ ಬೇರೆ ದಾರಿ ಹುಡುಕಿಕೊಂಡಿದ್ದಾರೆ, ನಿಮ್ಮ ಹತ್ತಿರ ಬರುತ್ತಾ ಇಲ್ಲ, ಕ್ಯಾನ್ಸಲ್ ಆಯಿತಲ್ಲಾ, ಬೇಡ ಬಿಡಿ ಅಂತ ಅವರೇ ಸ್ವಯಂ ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಏತಕ್ಕೆ ತೊಂದರೆ ಕೊಡುತ್ತೀರಾ? ಎರಡು ಲಕ್ಷ ಮನೆ ಕಟ್ಟಿಬಿಟ್ಟಿದ್ದಾರೆ, ಅವುಗಳನ್ನು ಒಡೆಯುವುದಕ್ಕೆ ಆಗುವುದಿಲ್ಲ, ದಯವಿಟ್ಟು ನಕ್ಷೆ ಮಂಜೂರು ಮಾಡಿಕೊಟ್ಟರೆ ಒಳ್ಳೆಯದು ಸ್ಥಳೀಯ ನಗರಸಭೆಗೆ ನಕ್ಷೆ ಮಂಜೂರು ಮಾಡುವ ಅಧಿಕಾರ ಕೊಡಿ.

ಅಧ್ಯಕ್ಷರು : ಮಾನ್ಯ ಅಶೋಕ್ ಅವರೇ, ಅರ್ಧ ಗಂಟೆ ಅದರ ಬಗ್ಗೆ ಚರ್ಚೆಗೆ ಅವಕಾಶ ಇದೆ. ಆಗ ಚರ್ಚೆ ಮಾಡಬಹುದು ವಿವರವಾಗಿ ಅದೇ ಪ್ರಶ್ನೆ ಬಂದುಬಿಟ್ಟಿದೆ. ಸಚಿವರೇ ಏನು ಹೇಳುವಿರೋ ನೀವು ಹೇಳಿಬಿಡಿ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಬಿಡಿಎ ಕೂಡ ಪ್ಲಾನಿಂಗ್ ಅಥಾರಿಟಿ ಆಗಿರುವುದರಿಂದ ಕಾನೂನು ಬಿಟ್ಟು ನಾವು ಹೋಗಲು ಬರುವುದಿಲ್ಲ. ಪ್ಲಾನಿಂಗ್ ಬಿಡಿಎಗೇ ಬರುವುದರಿಂದ ಒಂದರಿಂದ ಎರಡರಷ್ಟು ಫೀಸನ್ನು ನಾವು ಮಾಡಿ ಹಾಕುತ್ತೇವೆ ಆಗ ಅವರು ರೆಗ್ಯುಲರೈಸ್ ಮಾಡಿಕೊಳ್ಳಬಹುದು. ವ್ಯಾಪಕವಾಗಿ ಭ್ರಷ್ಟಚಾರ ಜಾಸ್ತಿಯಾಗುತ್ತದೆ ಎಂಬ ಒಂದೇ ಯೋಚನೆಯಿಂದ ಇದನ್ನು ತಂದಿದ್ದೇವೆ.

ಶ್ರಿ ವಿ. ಸೋಮಣ್ಣ : ಬಿಡಿಎನೇ ಪ್ಲಾನಿಂಗ್ ಅಥಾರಿಟಿ. ಆದರೆ ಬೆಂಗಳೂರು ಸರಹದ್ದಿನಲ್ಲಿರುವ ಸಿಎಂಸಿಗಳು ಅವರದೇ ಆದ ಎಲ್ಲಾ ಈ ಸೌಲಭ್ಯಗಳನ್ನು ಅಳವಡಿಸಿಕೊಂಡಿರುವುದರಿಂದ ಅವತ್ತಿನ ಅಧಿಕಾರಿಗಳು 6 ತಿಂಗಳಿಂದೀಚೆಗೆ ತಪ್ಪು ಮಾಹಿತಿ ಕೊಟ್ಟು ನಿಲ್ಲಿಸಿರುವುದು ಶೋಚನೀಯವಾದ ಕೆಲಸ. ನಾನು ಸನ್ಮಾನ್ಯ ಅಧ್ಯಕ್ಷರ ಮುಖೇನ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಏನು ಹಿಂದಿನಿಂದ ನಡೆದು ಕೊಂಡು ಬಂದಿದೆ ಸಿಎಂಸಿಗಳಲ್ಲಿ ಸರ್ಕಾರಿ ಜಾಗವನ್ನು ಹೊರತುಪಡಿಸಿ, ಸಿವಿಕ್ ಅಮಿನಿಟೀಸ್‌ಗೆ ಬಿಟ್ಟಿರುವ ಜಾಗ ಹೊರತುಪಡಿಸಿ ಈಗಾಗಲೇ ಖಾಸಗಿ ಬಡಾವಣೆಗಳು ನಿರ್ಮಾಣಗೊಂಡು ಕೆಲವು ಕಡೆ ಬಿಡಿಎ ಇದೆ ಕೆಲವು ಕಡೆ ರೆವಿನ್ಯೂ ಪಾಕೆಟ್‌ಗಳನ್ನು ಸಕ್ರಮಗೊಳಿಸಿರುವುದರಿಂದ 38 ಸಿ ಅನ್ನೂ ಊರ್ಜಿತ ಗೊಳಿಸಿರುವುದರಿಂದ ಹಿಂದಿನಿಂದ ಏನು ಮಾಡಿಕೊಂಡು ಬಂದಿದ್ದಾರೆ ಇದರಿಂದ ಸರ್ಕಾರಕ್ಕೆ ದುಡ್ಡು ಬರುತ್ತಾ ಇಲ್ಲ. ನಕಲಿ ದಾಖಲೆಗಳು ಹುಟ್ಟುತ್ತಿವೆ, ಯಾವುದೋ ಆಫೀಸಿನಲ್ಲಿ ಕೂತು ಯಾರೋ ಮೊಹರು ಒತ್ತಿ ಅವರೇ ಕಮಿಶನರ್ ಆಗಿದ್ದಾರೆ ಅವರೇ ಇಂಜಿನಿಯರ್ ಆಗಿದ್ದಾರೆ, ಅವರೇ ಎಲ್ಲಾ ತರದ್ದೂ ಮಾಡುತ್ತಿದ್ದಾರೆ. ಮತ್ತೆ ಸಿಡಿಪಿ ಕೂಡ ಗಾಳಿಗೆ ತೂರಿದ್ದಾರೆ. ದಯಮಾಡಿ ನಾನು ತಮ್ಮ ಮೂಲಕ ಸಚಿವರಿಗೆ ವಿನಂತಿ ಮಾಡುವುದು ಇಷ್ಟೇನೆ. ಇದೊಂದು ಸೂಕ್ಷ್ಮವಾದ ವಿಚಾರ. ಯಾವರೀತಿ ತಪ್ಪುಗ್ರಹಿಕೆಯಿಂದ ಇದನ್ನು ನಿಲ್ಲಿಸುವುದಕ್ಕೆ ಕಾರಣಕರ್ತರಾಗಿದ್ದಾರೋ ನನಗಂತೂ ಗೊತ್ತಿಲ್ಲ. ಏನಿದು ನಡೆದುಕೊಂಡು ಬಂದಿದೆ ಕಾರ್ಪೊರೇಷನ್ ಲಿಮಿಟನ್ನು ಬಿಟ್ಟು, ಬಿಡಿಎನವರೇ ಬಡಾವಣೆ ಮಾಡಿರುತ್ತಾರೆ, ಅವರೇ ಸಿಎಂಸಿಗೆ ವಹಿಸಿಕೊಟ್ಟಿರುತ್ತಾರೆ ಅವರೇ ಮತ್ತೇ ಹೇಳುತ್ತಾರೆ ಪ್ರತಿಯೊಂದಕ್ಕೂ ಬರಲಿ ಅಂತ. ಇದು ಗೊಂದಲವಾಗಿ ಎಲ್ಲೋ ಒಂದು ಕಡೆ ಭ್ರಷ್ಟಾಚಾರಕ್ಕೆ ಮತ್ತೊಂದು ಮುಖವಾಗುತ್ತಿದೆ. ಆದ್ದರಿಂದ ದಯಮಾಡಿ ಇದರಲ್ಲಿ ತಾವು ಒಂದೇ ಒಂದು ಸೂಚನೆ ಕೊಡಬೇಕಾದ್ದು. ಸರ್ಕಾರಿ ಜಾಗಗಳೇನಿದೆ ಸಿವಿಕ್ ಅಮಿನಿಟೀಸ್‌ಗೆ ಬಿಟ್ಟಿರುವ ಜಾಗಗಳೇನಿದೆ ಇಂಥದನ್ನು ಯಾವುದೇ ಕಾರಣಕ್ಕೂ

ಮಾಡಬಾರದು. ಯಾರು 20x30, 30x40, 40x60,ರಲ್ಲಿ ಮನೆ ಕಟ್ಟಿದ್ದಾರೆ ಕಟ್ಟಬೇಕೆಂದು ಇದ್ದಾರೆ ಅಂಥವರಿಗೆ ಏನು ಈಗಾಗಲೇ ಸರ್ಕಾರ ಸವಲತ್ತು ಕೊಟ್ಟಿತ್ತು ಅದನ್ನು ದಯಮಾಡಿ ಮುಂದುವರೆಸಿಕೊಂಡು ಹೋಗುವುದರಿಂದ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ಹಣ ಬರುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಸೋಮಣ್ಣನವರು ಹೇಳಿದ್ದರ ಬಗ್ಗೆ ಒಂದು ಹೇಳಲು ಇಷ್ಟಪಡುತ್ತೇನೆ. ಕೆಲವು ಜಾಗದಲ್ಲಿ ಸಿಎಂಸಿಗಳಿಗೆ ಕೊಟ್ಟು ಸ್ಲಂಗಳಾಗಿ ಪರಿವರ್ತನೆಯಾಗಿವೆ. ಬೆಂಗಳೂರನ್ನು ಸಿಂಗಾಪುರ ಮಾಡಬೇಕೆಂದು ಚಿಂತನೆ ಮಾಡಿದ ಸರ್ಕಾರಗಳು, ನಾಳೆ ಸುತ್ತಲೂ ಸ್ಲಂ ಇಟ್ಟುಕೊಂಡು ಒಳಗಡೆ ಸಿಂಗಾಪುರ ಇದೆ ಅಂತ ಹೇಳಿದರೆ ಯಾವ ತರಹ ಯೋಚನೆ ಚಿಂತನೆ ಆಗತ್ತದೆ? ಇದನ್ನೂ ನಾವು ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಸೋಮಣ್ಣನವರು ಆ ಖಾತೆಯ ಸಚಿವರೂ ಆಗಿದ್ದರು. ನನಗಿಂತ ಹೆಚ್ಚಿಗೆ ಅವರಿಗೆ ಇದರ ಮಾಹಿತಿ ಇದೆ. ಸ್ವಲ್ಪ ಸಿಎಂಸಿಗಳಿಗೆ ಕೊಟ್ಟರೆ ಏನೇನಾಗಿದೆ, ಏನಾಗುತ್ತದೆ ಎಂಬುದೆಲ್ಲಾ ಅವರಿಗೆ ಗೊತ್ತಿದೆ. ಆದ್ದರಿಂದ ಬಿಡಿಎ ಪ್ಲಾನಿಂಗ್ ಅಥಾರಿಟಿ ಇರುವುದರಿಂದ ಅವರ ಮೂಲಕವೇ ಸರ್ವೆ ಮಾಡಿ ಅದೇನು ಫೆನಾಲ್ಟಿ ಇದೆ ಅದು ಹಾಕಿಸಿ ಕೊಡಿಸೋಣ. ಅದಕ್ಕೆ ನಮ್ಮದೇನೂ ವಿರೋಧ ಇಲ್ಲ. ಅದುಬಿಟ್ಟು ನಾವು ನೇರವಾಗಿ ಸಿಎಂಸಿಗಳಿಗೇ ಕೊಟ್ಟುಬಿಡೋಣ ಅಂದರೆ ಅದು ಸ್ಲಂಗಳಾಗಿ ಪರಿವರ್ತನೆ ಆಗುತ್ತದೆ ಅಷ್ಟೇ.

ಅಧ್ಯಕ್ಷರು : ಅರ್ಧ ಗಂಟೆ ಚರ್ಚೆಗೆ ಅವಕಾಶ ಇದೆ, ಆಗ ತಾವೆಲ್ಲ ಮಾತನಾಡಿ.

ಶ್ರೀ ರಾಮಲಿಂಗರೆಡ್ಡಿ : ಸಿಎಂಸಿ ವ್ಯಾಪ್ತಿಯಲ್ಲಿ ಬಿಡಿಎ ಅಧಿಸೂಚನೆ ಮಾಡಿರುವ ಏರಿಯಾದಲ್ಲಿ ಖಾತೆ ಮಾಡಬಾರದು ಅಂತ ಹಿಂದಿನ ಸರ್ಕಾರ ಡೈರೆಕ್ಷನ್ ಕೊಟ್ಟಿತ್ತು, ಈಗ ಅಲ್ಲಿ ಪ್ಲಾನಿಂಗೂ ಇಲ್ಲ ಏನೂ ಇಲ್ಲ ಬಿಡಿ, ಎಲ್ಲಾ 15X20 ಅಡಿ ರಸ್ತೆಗಳು, ದೊಡ್ಡ ಸ್ಲಂ ತರಹವೇ ಆಗಿಹೋಗಿವೆ.

ಚಿಂತಾಮಣಿ ನಗರದಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಾಣದ ಬಗ್ಗೆ

132(574) ಡಾ: ಸುಧಾಕರ್.ಎಂ.ಸಿ(ಚಿಂತಾಮಣಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಂತಾಮಣಿ ನಗರದ ಚೇಳೂರು ರಸ್ತೆಯ ಹಿಟ್ಟಿನ ಗಿರಣಿ ಪಕ್ಕದಲ್ಲಿದ್ದ ಓವರ್ ಹೆಡ್ ಟ್ಯಾಂಕನ್ನು ಕೆಡವಿ ಹಾಕಿ ಎಷ್ಟು ವರ್ಷಗಳಾಯಿತು;

ಆ) ಈ ಓವರ್ ಹೆಡ್ ಟ್ಯಾಂಕ್ ನಿಂದ ಯಾವ ಯಾವ ಬಡಾವಣೆಗೆ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಲಾಗಿತ್ತು. (ವಿವರವನ್ನು ನೀಡುವುದು);

ಇ) ಈ ಬಡಾವಣೆಗಳಿಗೆ ಓವರ್ ಹೆಡ್ ಟ್ಯಾಂಕ್ ಇಲ್ಲದೆ ಕುಡಿಯುವ ನೀರಿನ ಸೌಲಭ್ಯವನ್ನು ಕೊಡದೆ ಇರುವುದರಿಂದ ಅಲ್ಲಿಯೂ ನಾಗರೀಕರಿಗೆ ಆಗುತ್ತಿರುವ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇಲ್ಲಿಯವರೆಗೂ ಸಹ ಓವರ್ ಹೆಡ್ ಟ್ಯಾಂಕ್ ಕಟ್ಟದೇ ಇರುವುದಕ್ಕೆ ಕಾರಣಗಳೇನು ಹಾಗೂ ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿ) :

ಅ) 2 ವರ್ಷ.